56

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ

ದಿನಾಂಕ : DATE : 10/3/2021

# ಉತ್ತರಾಖಂಡ ಸಿಎಂ ರಾಜೀನಾಮೆ

ಡೆಹ್ರಾಡೂನ್: ಉತ್ತರಾಖಂಡದಲ್ಲಿ ಮಹತ್ವದ ಬೆಳವಣಿಗೆಯೊಂದು ನಡೆದಿದ್ದು ಮುಖ್ಯಮಂತ್ರಿ ತ್ರಿವೇಂದ್ರ ಸಿಂಗ್ ರಾವತ್ ಅವರು ರಾಜೀನಾಮೆ ನೀಡಿದ್ದಾರೆ. ಬಿಜೆಪಿ ಹೈಕಮಾಂಡ್ ನಿರ್ದೇಶನದ ಮೇರೆಗೆ ಪದತ್ಯಾಗ ಮಾಡಿದ್ದು ರಾಜ್ಯಪಾಲರು ಅಂಗೀಕರಿಸಿದ್ದಾರೆ.



ರಾಜ್ಯದೊಳಗಿನ ಪಕ್ಷದ ನಾಯಕರ ಜತೆಗೆ ಸಂಪರ್ಕ ಕಳೆದುಕೊಂಡಿರುವ ಆರೋಪ ಎದುರಿಸುತ್ತಿದ್ದ ರಾವತ್ ಅವರನ್ನು ಪಕ್ಷದ ವರಿಷ್ಠರು ದೆಹಲಿಗೆ ಕರೆಸಿಕೊಂಡಿದ್ದರು. ಮಂಗಳವಾರವಷ್ಟೇ ಡೆಹ್ರಾಡೂನ್‌ಗೆ ವಾಪಸ್ ಆದ ರಾವತ್ ಅವರು, ರಾಜ್ಯಪಾಲರ ಭವನಕ್ಕೆ ತೆರಳಿ ರಾಜೀನಾಮೆ ಸಲ್ಲಿಸಿದರು.

ಬುಧವಾರ ಬೆಳಗ್ಗೆ ಬಿಜೆಪಿ ಶಾಸಕಾಂಗ ಸಭೆ ನಡೆಯಲಿದ್ದು ಇಲ್ಲಿ ನೂತನ ಮುಖ್ಯಮಂತ್ರಿಯ ಆಯ್ಕೆ ನಡೆಯಲಿದೆ. ಇಲ್ಲಿ ಮುಂದಿನ ಫೆಬ್ರವರಿಗೆ ಚುನಾವಣೆ ಇದೆ.

ಮೂಲಗಳ ಪ್ರಕಾರ, ಸಚಿವ ಧನ್ ಸಿಂಗ್ ರಾವತ್ ಅವರೇ ಸಿಎಂ ಆಗಬಹುದು ಎಂದು ಹೇಳಲಾಗುತ್ತಿದೆ. ಅಷ್ಟೇ ಅಲ್ಲ, ಅಜಯ್ ಭಟ್ ಮತ್ತು ಅನಿಲ್ ಬಲೂನಿ ಅವರ ಹೆಸರೂ ಕೇಳಿಬರುತ್ತಿವೆ.